**ಎಸ್. ಗಂಗಾಧರಯ್ಯ**

ಕಲೆ: ವೆಂಕಟ್ರಮಣ ಭಟ್

# ಹುತ್ತ

ಊರು ಏಳುವುದಕ್ಕೆ ಇನ್ನೂ ಶ್ಯಾನೆ ಹೊತ್ತಿದೆ ಅನ್ನುವಾಗಲೇ ಗಾಳಿ ಗಂಗವ್ವನ ಮನೆಯಿಂದ ಹೊರಬಿದ್ದ ಅಡವಪ್ಪ ತನ್ನ ಮನೆಯನ್ನು ತಲುಪುತ್ತಲೇ ಜಗಲಿಯಲ್ಲಿ ಮಲಗಿರೋದು ಹೊನ್ನಟ್ಟಾಲಯ್ಯ ಅಂತ ಗೊತ್ತಾದರೂ ಏಳಿಸುವ ಗೋಜಿಗೋಗದೆ ಬೀಗ ತೆಗೆದವನೇ ಸೀದಾ ಬಚ್ಚಲು ಹೊಕ್ಕ. ನೀರೊಲೆಗೆ ಉರಿ ಹಾಕಿ ಹಂಗೇ ಬೆಂಕಿ ಕಾಯಿಸಿಕೊಳ್ಳುತ್ತಾ ಕೂತು ನೀರು ತೌಬೆಚ್ಚಗಾಗುತ್ತಲೇ ಸ್ನಾನ ಮಾಡಿ ಮಡಿಯುಟ್ಟು ದೇವರ ಕೋಣೆಯತ್ತ ನಡೆದ. ಅಲ್ಲಿದ್ದ ಪೂಜೆಯ ಸಾಮಾನುಗಳನ್ನೆಲ್ಲಾ ಬೆಳಗುವ ಸಲುವಾಗಿ ಒಂದೊಂದಾಗಿ ಎತ್ತಿ ಕಂಚಿನ ಗಂಗಳವೊಂದಕ್ಕೆ ತುಂಬಿಕೊಂಡು ಮೇಲೆದ್ದು ತಿರುಗಿದರೆ ಹೊನ್ನಟ್ಟಾಲಯ್ಯ ನಿಂತಿದ್ದ. 'ಅಯ್ಯೋ ಈಟೊತ್ಕೇ ಅದೇನ್ ಕಡ್ಯಾಕೆ ಎದ್ದವ್ನೋ ಕಾಣ್ಲಿಲ್ವಲ್ಲ ಈ ಪುಣ್ಯಾತ್ಮ?' ಅನ್ನುವಂತೆ ಹೊನ್ನಟ್ಟಾಲಯ್ಯನನ್ನೇ ನೋಡಿದ. 'ಕಡ್ಯಾಕೆ ಏನೂ ಇಲ್ದುದ್ರೂ ಹೇಳಾಕೆ ಮಸ್ತಾಗೈತೆ ವಸಿ ತಡ್ಕ,' ಅನ್ನುವಂತೆ ಅಡವಪ್ಪನನ್ನೇ ದಿಟ್ಟಿಸಿದ ಹೊನ್ನಟ್ಟಾಲಯ್ಯ. ಅವನ ಮುಗುಂ ಭಾವವನ್ನು ಕಂಡ ಅಡವಪ್ಪ, 'ಅದೇನ್ ಕಡ್ದು ಕಟ್ಟೆ ಹಾಕವ್ನೋ ಅದಾವ ಘನಂಧಾರಿ ವಿಷ್ಯಾ ಐತೋ ಹೇಳಾಕೆ' ಎಂದಂದುಕೊಂಡು ಕೈಯ್ಯಲ್ಲಿದ್ದ ತಟ್ಟೆಯನ್ನು ಹಂಗೇ ಮತ್ತೆ ದೇವರಕೋಣೆಯಲ್ಲಿರಿಸಿ ನಡುಮನೆಯ ಮಂಚದಲ್ಲಿ ಕೂತ. ಹೊನ್ನಟ್ಟಾಲಯ್ಯನೂ ಅಲ್ಲೇ ಹೋಗಿ ನಿಂತ. ಆಗ ಹೊರಗಿನ್ನೂ ಅಚ್ಚಗಾಗುತ್ತಿತ್ತು. ಲೋಕದ ಸಕಲಕೂ ಜೀವ ಇಳಕಣುತ್ತಿತ್ತು.

ಹೊನ್ನಟ್ಟಾಲಯ್ಯನ ಮಾತು ಕೇಳುತ್ತಲೇ ಅಡವಪ್ಪನಿಗೆ ಕಾದ ಸೀಸ ಕಿವಿಯೊಳಗಿಳಿದಂತಾಯ್ತು. ತನ್ನ ಮಾನ ಮರ್ಯಾದೆಯನ್ನು ಮೂರು ಕಾಸಿಗೆ ಹರಾಜಿಗಿಕ್ಕಿದ್ದಕ್ಕೆ ಜೊತೆಗೆ ತನ್ನಿರುವನ್ನೇ ಧಿಕ್ಕರಿಸಿದ್ದಕ್ಕೆ ಮಗ ಶಂಭುಲಿಂಗನ ರೂಪ ಕಣ್ಮುಂದೆ ನಿಲ್ಲುತ್ತಾ ಅಡವಪ್ಪನ ಮೊಗದಲ್ಲಿ ಕೆಂದಾಡುತ್ತಾ ಕಣ್ಣಾಲಿಗಳಲ್ಲಿ ನೀರು ತುಳುಕಾಡಿತು. ಇದಿಂಗಾಗುತ್ತೆ ಅಂತ ಮೊದಲೇ ಗೊತ್ತಿದ್ದ ಹೊನ್ನಟ್ಟಾಲಯ್ಯ ಕೊಂಚವೂ ವಿಚಲಿತನಾಗದೆ, 'ಇವ್ನು ಈ ಮಟ್ಟುಕ್ಕೆ ವೋಗ್ತಾನೆ ಅಂತಾವ ನಾನಂದ್ಕಂಡುರ್ಲಿಲ್ಲ ಬುಡು...' ಅನ್ನುತ್ತಾ ಅಡವಪ್ಪನತ್ತ ನೋಡಿದ. ಅಡವಪ್ಪನ ಕೆಂಪೇರಿದ್ದ ಮೊಗದಲ್ಲಿ ದದ್ದುಗಟ್ಟುತ್ತಿದ್ದ ಆಕ್ರೋಶ ಹಾಗೂ ಅಸಹಾಯಕ ಭಾವದೆದುರು ಅವನಾಡಿದ ಮಾತುಗಳು ತಟ್ಟಾಡಿಕೊಂಡು ಮಂಡಿಯೂರಿದವು.

ಮಗ ಶಂಭುಲಿಂಗ ಕಳೆದೆರಡು ದಿನಗಳಿಂದ ಮನೆ ಸೇರಿರಲಿಲ್ಲ. ಆ ಬಗ್ಗೆ ಅಡವಪ್ಪನೂ ಅಷ್ಟು ಮನಸಿಗಾಕಿಕೊಂಡಿರಲಿಲ್ಲ. ಇತ್ತೀಚೆಗೆ ಅವನು ಹೀಗೆ ಕೆಲವೊಮ್ಮೆ ವಾರಗಟ್ಟಲೆ ಹೇಳದೇ ಕೇಳದೇ ಹೋಗಿಬಿಡುತ್ತಿದ್ದ. ಮೊದಮೊದಲು ಏನು ಎತ್ತ ಅಂತ ಕೇಳುತ್ತಿದ್ದ ಅಡವಪ್ಪ. ಆದರೆ, ಯಾವಾಗ ಶಂಭುಲಿಂಗ ತನ್ನ ಮಾತುಗಳಲ್ಲೆಲ್ಲಾ ತಪ್ಪುಡುಕಿಕೊಂಡವನಂತೆ ತಿರುಗಿ ಬೀಳೋಕೆ ಶುರುಮಾಡಿದನೋ ಆವಾಗಿಂದ ಅಡವಪ್ಪ ಆ ಬಗ್ಗೆ ಚಕಾರವೆತ್ತುವುದನ್ನೇ ಬಿಟ್ಟಿದ್ದ. ಮನೆಗೆಲಸಗಳನ್ನೂ ಹತ್ತಿದಂಗೆ ಇಳಿದಂಗೆ ಬೇಕೆಂದರೆ ಬೇಕು ಇಲ್ಲಾಂದರೆ ಇಲ್ಲ ಅನ್ನುವಂತೆ ಮಾಡುತ್ತಿದ್ದ ಶಂಭುಲಿಂಗ. ಹಂಗಾಗಿ ಅಡವಪ್ಪ ಯಾವುದಕ್ಕೂ ಅವನನ್ನು ನೆಚ್ಚಿಕೊಂಡಿರಲಿಲ್ಲ. ಆದರೆ, ಮಾಡೋ ಕೆಲಸ ಬಿಟ್ಟು ಊರ

